ಮೈಸೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳು.

1229(1140) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ತಾಲ್ಲೂಕಿನಲ್ಲಿರುವ ಸಣ್ಣ ಕೈಗಾರಿಕೆಗಳೆಷ್ಟು;

ಆ) ಕಳೆದ ಎರಡು ವರ್ಷ ಅವಧಿಯಲ್ಲಿ ಮುಚ್ಚಿರುವ ಘಟಕಗಳೆಷ್ಟು;

ಇ) ಮುಚ್ಚಿರುವ ಘಟಕಗಳನ್ನು ತೆರೆಯಲು ಏನು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಸ್.ಆರ್. ಹಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಅ) 8,223

ಆ) 212

ಇ) ಮುಚ್ಚಿರುವ ಘಟಕಗಳನ್ನು ತೆರೆಯುವ ಬಗ್ಗೆ ಸಚಿವಾಲಯದಿಂದ ನೇರವಾಗಿ ಕ್ರಮ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಪುನಶ್ಚೇತನಗೊಂಡ ಕೈಗಾರಿಕೆಗಳಿಗೆ ಮಾತ್ರ ಕೈಗಾರಿಕಾ ನೀತಿಯಂತೆ ಸೌಲಭ್ಯಗಳನ್ನು ಒದಗಿಸಿ ಕೊಡಲಾಗುತ್ತದೆ.

ರೇಷ್ಮೆಗೆ ಬೆಲೆ ನಿಗಧಿ.

1230 (1151) ಶ್ರೀ ಗುರುಸ್ವಾಮಿ ಎ.ಎನ್. (ಚಾಮುಂಡೇಶ್ವರಿ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರೇಷ್ಮೆಗೆ ಸಂಬಂಧಿಸಿದಂತೆ ಸಾಗಾಣಿಕೆ ಅಮದು ಮತ್ತು ಬೆಲೆ ನಿಗದಿಪಡಿಸಲು ಎಲ್ಲಾ ರಾಜ್ಯಗಳಲ್ಲಿ ಏಕರೂಪ ಕಾನೂನು ಜಾರಿಗೆ ತರಲು ಕೇಂದ್ರಸರ್ಕಾರ ನಡೆಸಲಾಗಿದೆಯೇ; ಈ ನಿಟ್ಟಿನಲ್ಲಿ ಬೇರೆ ರಾಜ್ಯಗಳ ಜೊತೆ ಮಾತುಕತೆ ನಡೆಸಲಾಗಿದೆಯೇ?

ಆ. ಈ ನಿಟ್ಟಿನಲ್ಲಿ ಅಮರ ನಿಲುವೇನು?

ಇ. ರೇಷ್ಮೆ ಬೆಳೆ ಲಾಭದಾಯಕವಾಗಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಹಾದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ರೇಷ್ಮೆ ಬೆಳೆ ಹೆಚ್ಚು ಲಾಭದಾಯಕವಾಗಲು ಇಲಾಖೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ಪ್ರತಿ ಹೆಕ್ಟೇರ್‌ನಲ್ಲಿ ಹಿಪ್ಪುನೇರಳೆ ಸೊಪ್ಪಿನ ಉತ್ಪಾದಕತೆ ಹೆಚ್ಚಿಸಲು ಅಧಿಕ ಇಳುವರಿ ನೀಡುವ ಹೊಸ ಹಿಪ್ಪುನೇರಳೆ ತಳಿಗಳ ನಾಟಿಗೆ ಪ್ರೋತ್ಸಾಹ
2. ಉತ್ತಮ ಗುಣಮಟ್ಟದ ಹಾಗೂ ಅಧಿಕ ಇಳುವರಿ ನೀಡುವ ಹೊಸ ತಳಿ ಹಿಪ್ಪುನೇರಳೆ ಸಸಿಗಳನ್ನು ಬೆಳೆಸುವ ರೈತರಿಗೆ ಸಹಾಯಧನ.
3. ಹೊಸ ದ್ವಿತಳಿ ಸಂಗರಣ ರೇಷ್ಮೆ ಮೊಟ್ಟೆಗಳ ಸಾಕಾಣಿಕೆಗೆ ಪ್ರೋತ್ಸಾಹ.
4. ಹಿಪ್ಪುನೇರಳೆ ತೋಟಕ್ಕೆ ಹನಿನೀರಾವರಿ ಅಳವಡಿಸಲು ಸಹಾಯಧನ
5. ಪ್ರತ್ಯೇಕ ಹುಳು ಸಾಕಾಣಿ ಮನೆ ನಿರ್ಮಾಣಕ್ಕೆ ಸಹಾಯ ಧನ
6. ದ್ವಿತಳಿ (ಸಿಎಸ್‌ಆರ್) ಸಾಕಾಣಿಕೆಯನ್ನು ಪ್ರೋತ್ಸಾಹಿಸಲು ಉಚಿತ ರೇಷ್ಮೆ ಮೊಟ್ಟೆಗಳ ಸರಬರಾಜು.
7. ಮೌಂಟ್ ಎಂಡ್ ಫೀಡಿಂಗ್‌ಗಳ ಸ್ಥಾಪನೆಗೆ ಸಹಾಯಧನ ಮತ್ತು ಸುಲಭ ಸೌಲಭ್ಯ.
8. ದ್ವಿತಳಿ ಚಿಟ್ಟಿ ರೇಷ್ಮೆಗೆ ಪ್ರತಿ ಕೆ.ಜಿ.ಗೆ ರೂ.75ರ ಪ್ರೋತ್ಸಾಹಧನ.
9. ದ್ವಿತಳಿ ರೇಷ್ಮೆ ಬೆಳೆಗಾರರಿಗೆ ರೋಟರಿ ಮೌಂಟೇಜುಗಳನ್ನು ಉಚಿತವಾಗಿ ಸರಬರಾಜು ಮಾಡುವುದು.
10. ಹೊಸ ತಾಂತ್ರಿಕತೆಗಳನ್ನು ಬಳಸಿ ಗುಣಮಟ್ಟ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಿ ಉತ್ಪಾದನಾ ವೆಚ್ಚ ತಗ್ಗಿಸುವುದು.

ಸಕ್ಕರೆ ಮಾರಾಟ.

1231 (1152) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಕ್ಕರೆ ಅನ್-ಕಂಟ್ರೋಲ್ ಲಿಸ್ಟ್‌ನಲ್ಲಿದ್ದರೂ ಸಹ ಮಾರಾಟ ಬೆಲೆ ನಿಗದಿ ಸಾಗಾಣಿಕೆ, ಅಂತರ ರಾಜ್ಯ ಸಾಗಾಣಿಕೆ ಮುಂತಾದ ಕ್ರಮಗಳಿಗೆ ರಾಜ್ಯ ಸರ್ಕಾರಕ್ಕೆ ಅಧಿಕಾರವಿದ್ದು, ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಾಗಬೇಕಾದರೆ ಇದರ ನಿವಾರಣೆಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—